ಸಾಕ್ಷಿಯನ್ನು ಈಹೊತ್ತು ದಿನಾಂಕ : 24.02.2021 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ ಎಂ ವಿ ಸಿ ಆರ್ ವಕೀಲರಿಂದ :

ಈಗ ನಿಪಿ 32 ದಾಖಲೆ ನೋಡುತ್ತಿದ್ದು ಅದರಲ್ಲಿರುವ ವಿಷಯವನ್ನು ಓದಿ ತಿಳಿದುಕೊಂಡಿರುತ್ತೇನೆ . ಸದರಿ ದಾಖಲೆಯನ್ನು ಪಾಪಯ್ಯರವರೇ ಬರೆದುಕೊಟ್ಟಿರುತ್ತಾರೆಂದು ಸಾಕ್ಷಿದಾರರು ಸುನಂದಮ್ಮ ಇರುತ್ತಾರೆ . ಈಗ ಸದರಿ ಜಿಪಿಎ ಕೊನೆ ಪುಟ ನೋಡುತ್ತಿದ್ದು ಅದರಲ್ಲಿ ಸಾಕ್ಷಿದಾರರೆಂದು ಕಾಣಿಸಿಲ್ಲ ಎಂದರೆ ಸರಿ. ಅದರಂತೆ ಸುನಂದಮ್ಮವರು ಸಾಕ್ಷಿದಾರರೆಂದು ಸಹಿ ಮಾಡಿಲ್ಲ ಎಂದರೆ ಸರಿ .

2. ದಿ : 18.05.1992 ರಂದು ಪಾಪಯ್ಯರವರು ನಿಪಿ 32 ದಾಖಲೆ ಬರೆದುಕೊಟ್ಟಿದ್ದಾರೆಂದು ತೋರಿಸಲು ಪೂರಕವಾದ ಬೇರೆ ದಾಖಲೆ ಪ್ರಮಾಣ ಪತ್ರ ಇರುತ್ತದೆ. ಪ್ರಮಾಣ ಪತ್ರ ಬಿಟ್ಟು ಬೇರೆ ದಾಖಲೆಗಳು ಇಲ್ಲ. ಜಿಪಿಎ ನ್ನು ಪಾಪಯ್ಯರವರೇ ಬರೆದುಕೊಟ್ಟಿದ್ದಾರೆಂದು ಅದರಲ್ಲಿರುವ ಅವರ ಸಹಿ ನೋಡಿ ಹೇಳುತ್ತೇನೆ . ಅದರಂತೆ ಸ್ವಾಧೀನ ಕರಾರು ಪತ್ರ ಇರುತ್ತದೆ . ಬೇರೆ ಆಧಾರ ಇರುವುದಿಲ್ಲ. ಜಿಪಿಎ ನೋಟರಿ ಆಗಿರುತ್ತದೆ . ಕಂದಸ್ವಾಮಿ ನೋಟರಿರವರ ಮುಂದೆ ಆಗಿರುತ್ತದೆ . ನೋಟರಿಯವರನ್ನು ಸದರಿ ದಾಖಲೆ ಆದ ಬಗ್ಗೆ ವಿಚಾರಿಸಿಲ್ಲ.

3. ನಿಪಿ 32 ರಲ್ಲಿ ಸರ್ವೆ ನಂಬರ್ 48 , ಸೈಟ್ ನಂಬರ್ 1 ಎ ಬಗ್ಗೆ ಕಾಣಿಸಲಾಗಿದೆ . ದಿ ಃ 18.05.1992 ರಂದು ಸರ್ವೆ ನಂಬರ್ 48 ರಲ್ಲಿ ಸೈಟ್ ನಂಬರ್ 1 ಎ ಆ ದಿವಸ ಮಾಡಿದ್ದರು ಎಂದು ತೋರಿಸಲು ಮೇಲೆ ಹೇಳಿದ ಮೂರು ದಾಖಲೆ ಹೊರತು ಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ. ನಿಪಿ 32 ಜಿಪಿಎ ನ್ನು ಪಾಪಯ್ಯ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

4. ಈಗ ನಿಪಿ 15 ದಿ ಃ 06.08.2002 ರ ಕ್ರಯಪತ್ರವನ್ನು ನೋಡುತ್ತಿದ್ದು ಅದನ್ನು ಪುಷ್ಪ ರವರು ನನ್ನ ತಂದೆಗೆ ಬರೆದುಕೊಟ್ಟಿರುತ್ತಾರೆ . ಸದರಿ ದಾಖಲೆಯಲ್ಲಿ ವೆಂಕಟೇಶ್ ರವರು ಇಂತಹ ಜಿಪಿಎ ಪ್ರಕಾರ ಅಥವಾ ನಿಪಿ 32 ರ ಆಧಾರದ ಮೇಲೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆಂದು ಕಾಣಿಸಿರುತ್ತಾರೆಯೇ ಹೇಗೆ ಎಂದರೆ ಸಾಕ್ಷಿಯು ಸದರಿ ದಾಖಲೆ ಓದಿ ನೋಡಿ ಸಾಕ್ಷಿಯು ದಿನಾಂಕ ನಮೂದಿಸಿಲ್ಲ ಆದರೆ ಪಾಪಯ್ಯ ಬರೆದುಕೊಟ್ಟ ಜಿಪಿಎ ಎಂದು ನಮೂದಿಸಲಾಗಿದೆ ಎಂದು ಹೇಳುತ್ತಾರೆ . ಪುಷ್ಪ ರವರು ವೆಂಕಟೇಶ್ ರವರಿಗೆ ಮೂಲ ಜಿಪಿಎ ಕೊಡುತ್ತಿದ್ದೇನೆ ಎಂದು ಕಾಣಿಸಿಲ್ಲ ಎಂದರೆ ಸರಿ .

5. ಪುಷ್ಪ ರವರು ನಮಗೆ ಬರೆದುಕೊಟ್ಟಿರುತ್ತಾರೆ ಎನ್ನಲಾದ ಕ್ರಯಪತ್ರವನ್ನು ಹಾಜರುಪಡಿಸಿಲ್ಲ. ಆದರೆ ಓ ಎಸ್ 3505/2007 ರಲ್ಲಿ ನಿಪಿ 1 ಎಂದು ಗುರುತಿಸಲಾಗಿದೆ . ಈಗ ಅದನ್ನು ನೋಡುತ್ತಿದ್ದು

ಜಿಪಿಎ ವೆಂಕಟೇಶ್ ರವರಿಂದ ನಿವೇಶನ ಸಂಖ್ಯೆ 1 ಎ ಖರೀದಿಸಿದ ಬಗ್ಗೆ ಅದರಲ್ಲಿ ಕಾಣಿಸಿಲ್ಲ ಎಂದರೆ ಸರಿ . ವೆಂಕಟೇಶ್ ಎನ್ನುವವರಿಗೆ ನಿಪಿ 32 ಜಿಪಿಎ ನ್ನು ತಾನು ಪಡೆದ್ದನ್ನು ನನಗೆ ನೀಡುತ್ತಿದ್ದೇನೆ ಎಂದು ಮೇಲೆ ಹೇಳಿದ ನಿಪಿ 1 ರಲ್ಲಿ ಕಾಣಿಸಿಲ್ಲ ಎಂದರೆ ಸರಿ . ಅದರಂತೆ ಪುಷ್ಪ ರವರು ಬರೆದುಕೊಟ್ಟ ಓ ಎಸ್ 3505/2007 ರಲ್ಲಿಯ ನಿಪಿ 1 ಕ್ರಯಪತ್ರ ದಿ ಃ 29.07.2004 ರಲ್ಲಿ ಈ ದಾವೆ ನಿಪಿ 33 ಮತ್ತು 34 ದಾಖಲೆ ಬಗ್ಗೆ ಕಾಣಿಸಿಲ್ಲ ಎಂದರೆ ಸರಿ .

6. ನಿಪಿ 33 ಮತ್ತು 34 ದಾಖಲೆಗಳು ನಿವೇಶನ ಸಂಖ್ಯೆ 1 ಎ ಗೆ ಸಂಬಂಧಪಟ್ಟಿರುತ್ತವೆ . ಸೈಟ್ ನಂಬರ್ 1 ಎ ಇದರ ಬಗ್ಗೆ 1992 ರಲ್ಲಿ ಪಾಪಯ್ಯರವರ ಹೆಸರಿನಲ್ಲಿ ಖಾತೆ ಇದ್ದ ಬಗ್ಗೆ ತೋರಿಸಲು ದಾಖಲೆ ಇರುವುದಿಲ್ಲ. ಸೈಟ್ ನಂಬರ್ 1 ಮತ್ತು 1 ಎ ಇದಕ್ಕೆ ಪಾಪಯ್ಯರವರು ಕಂದಾಯ ಕಟ್ಟಿರುವುದಿಲ್ಲ.

7. ಸೈಟ್ ನಂಬರ್ 1 ಮತ್ತು 1 ಎ ದಕ್ಕೆ ಜಿಪಿಎ ಆಧಾರದ ಮೇಲೆ ವೆಂಕಟೇಶ್ ರವರಿಗೆ ಖಾತೆಯಾಗಲೀ , ಅಸೆಸ್ ಮೆಂಟ್ ಆಗಲೀ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಿವೇಶನ ಸಂಖ್ಯೆ 1 ಕ್ಕೆ ಆಗಿದ್ದು ನಿವೇಶನ ಸಂಖ್ಯೆ 1 ಎ ಗೆ ಆಗಿಲ್ಲ ಎಂದು ಹೇಳುತ್ತಾರೆ . ನಿಪಿ 32 ರಿಂದ 34 ರ ಆಧಾರದ ಮೇಲೆ ನಿವೇಶನ ಸಂಖ್ಯೆ 1 ಎ ಗೆ ಖಾತೆ ಮಾಡಿದ ಬಗ್ಗೆ ತೋರಿಸಲು ಬೇರೆ ದಾಖಲೆ ಇರುವುದಿಲ್ಲ. ನಿವೇಶನ ಸಂಖ್ಯೆ 1 ಕ್ಕೆ ಕ್ರಯಪತ್ರದ ಆಧಾರದ ಮೇಲೆ 1991 ರಲ್ಲಿ

ಖಾತೆ ಆಗಿರುತ್ತದೆ . 1991 ರಿಂದ 2002 ರವರೆಗೆ ನಿವೇಶನ ಸಂಖ್ಯೆ 1 ಕ್ಕೆ ಖಾತೆ ಇರುತ್ತದೆ . ನಿವೇಶನ ಸಂಖ್ಯೆ 1 ಎ ಗೆ ಖಾತೆ ಇರುವುದಿಲ್ಲ. ಕಂದಾಯ ಕಟ್ಟಿದ ಬಗ್ಗೆ ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತು ಪಡಿಸಿ ಬೇರೆ ರಶೀದಿ ಇರುವುದಿಲ್ಲ.

8. ನಮ್ಮ ಪಾಟೀಸವಾಲು ಆದ ಮೇಲೆ ನಿಪಿ 32 ರಿಂದ 34 ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಮೂರು ದಾಖಲೆಗಳು ಪಾಪಯ್ಯರವರು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಪಾಪಯ್ಯರವರು ದಾಖಲೆ ಮಾಡಿಕೊಂಡಿದ್ದನ್ನು ನಾನು ನೋಡಿಲ್ಲ ಎಂದರೆ ಸರಿ . ನಾನು ಹೇಳಿದಂತೆ ಸರ್ವೆ ನಂಬರ್ 48 ರಲ್ಲಿ ನಿವೇಶನ ಸಂಖ್ಯೆ 1 ಮತ್ತು ನಿವೇಶನ ಸಂಖ್ಯೆ 1 ಎ ಮಾಡಿಲ್ಲ ಎಂದರೆ ಸರಿಯಲ್ಲ.

9. 2 ನೇ ಪ್ರತಿವಾದಿಯ ಪಾಟೀಸವಾಲು ಆದ ಮೇಲೆ ಆತನ ಆರೂವರೆ ಗುಂಟೆ ಜಮೀನನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 34 ಸ್ಕೆಚ್‌ನ್ನು ನಾನೇ ತಯಾರಿಸಿರುತ್ತೇನೆ . ನಿಪಿ 34 ನ್ನು ಯಾವ ಆಧಾರದ ಮೇಲೆ ತಯಾರಿಸಿರುತ್ತೀರಿ ಎಂದರೆ ಸಾಕ್ಷಿಯು ಕ್ರಯಪತ್ರ, ಸೈಟ್ ಮತ್ತು ಲೇ ಔಟ್ ನೋಡಿ ಮಾಡಿರುತ್ತೇನೆ . ಲೇ ಔಟ್ ಪ್ಲಾನ್ ನ್ನು ಹಾಜರುಪಡಿಸಿರುತ್ತೇನೆ . ಪುನಃ ಹೇಳುತ್ತೇನೆ ಲೇ ಔಟ್ ನೋಡಿ

ಮಾಡಿರುತ್ತೇನೆ ಲೇ ಔಟ್ ಪ್ಲಾನ್ ಅಲ್ಲ ಎಂದು ಸಾಕ್ಷಿ ಹೇಳುತ್ತಾರೆ . ನಿಪಿ 32 ಮತ್ತು 33 ದಾಖಲೆಗಳೊಂದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆಗ ಸ್ಕೆಚ್ ಮಾಡಿರಲಿಲ್ಲ. ಅದರಂತೆ ಮೇಲೆ ಹೇಳಿದ ನಿಪಿ 1 ಕ್ರಯಪತ್ರ ದೊಂದಿಗೆ ಕೂಡ ಸ್ಕೆಚ್ ಇರಲಿಲ್ಲ.

ಈ ಹಂತದಲ್ಲಿ ಹೆಚ್ಚಿನ ಪಾಟೀಸವಾಲನ್ನು ವಕೀಲರ ವಿನಂತಿಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .